**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ10042/2021**

ಪಿಡಬ್ಲ್ಯೂ- 6
ಸಿಡಬ್ಲ್ಯೂ- 7

| | | |
|---|---|---|
| ಸಾಕ್ಷಿ ಹೆಸರು | - | ಜಯಶೀಲಗೌಡ |
| ತಂದೆ ಹೆಸರು | - | ಧರ್ಮಪ್ಪಗೌಡ |
| ವಯಸ್ಸು | - | 65 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸಃ | - | ಕಚವಿ ಗ್ರಾಮ, ಸೊರಬ ತಾಲ್ಲೂಕು. |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 22-08-2024**

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>**

ಆರೋಪಿ ಗೊತ್ತು. ನನಗೆ ಪ್ರಾ ಸಾ 1 ಮತ್ತು ಪ್ರಾ ಸಾ -2 ಗೊತ್ತು. ಪ್ರಾ ಸಾ -4, ಪ್ರಾ ಸಾ -5, ಚಾಸಾ8 ರಿಂದ ಚಾಸಾ13 ರವರ ಪರಿಚಯ ಇದೆ. ಪ್ರಾ ಸಾ 2 ಮತ್ತು ಆರೋಪಿಯ ಮದ್ಯೆ ದಾರಿಯ ವಿಚಾರದಲ್ಲಿ ವೈಮನಸ್ಸು ಇದೆ. ಆ ವಿಚಾರದಲ್ಲಿ ಆರೋಪಿ ಪ್ರಾ ಸಾ -2 ರವರ ನಡುವೆ ಜಗಳ ಆಗುತ್ತಿತ್ತು. ಪ್ರಾ ಸಾ -2 ರವರಿಗೆ ದಿನಾಂಕಃ18-05-2020 ಮದ್ಯಾಹ್ನ 3 ಗಂಟೆಗೆ ನಾನು ಮನೆಯಲ್ಲಿದ್ದೆ. ಆಗ ಸದರಿ ಗಲಾಟೆಯ ಬಗ್ಗೆ ನಾನು ಕೇಳಿರುತ್ತೇನೆ ಆದರೆ ಖುದ್ದಾಗಿ ನೋಡಿಲ್ಲ. ಆರೋಪಿ ಪ್ರಾ ಸಾ 2 ರವರಿಗೆ ಹೊಡೆದಿದ್ದು ಪ್ರಾ ಸಾ2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ಪ್ರಾ ಸಾ -1 ರವರು ನನಗೆ ಹೇಳಿರುತ್ತಾರೆ. ಆರೋಪಿಯು ಪ್ರಾ ಸಾ 2 ರವರ ತಲೆಗೆ ಹೊಡೆದಿದ್ದು ಆತನನ್ನು ಆನವಟ್ಟಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ಹೇಳಿರುತ್ತಾರೆ. ಗಲಾಟೆಯನ್ನು ನಾನು ನೋಡಿರುತ್ತೇನೆ ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಪ್ರಾ ಸಾ -2 ರವರು ಆರೋಪಿಯ ಜಮೀನಿನಲ್ಲಿ ಓಡಾಡುವ ವಿಚಾರಕ್ಕೆ ತಕರಾರು ಮಾಡಿಕೊಳ್ಳುತ್ತಾ ಒಬ್ಬರಿಗೊಬ್ಬರು ದ್ವೇಷ ಸಾಧಿಸುತ್ತಾ ಜಮೀನಿನ ವಿಚಾರದಲ್ಲಿ ವೈಮನಸ್ಸು ಇದ್ದು ಪ್ರಾ ಸಾ -2 ರವರಿಗೆ ಆರೋಪಿ ಬೆದರಿಕೆ ಹಾಕುತ್ತಿದ್ದ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ.

ದಿನಾಂಕಃ 18-05-2020 ರಂದು ಮದ್ಯಾಹ್ನ 3 ಗಂಟೆಗೆ ನಾನು ನಮ್ಮ ಗ್ರಾಮದ ಮಹೇಶಗೌಡ ಇಬ್ಬರೂ ಸೇರಿಕೊಂಡು ಪ್ರಾ ಸಾ1 ರವರಿಗೆ ಸೇರಿದ ಸ.ನಂಃ6 ರ ಜಮೀನಿನ ಹತ್ತಿರ ನಡೆದುಕೊಂಡು ಹೋಗುತ್ತಿರುವಾಗ ಪ್ರಾ ಸಾ -1 ರವರು ತಮ್ಮ ಜಮೀನಿನಲ್ಲಿ ಮೆಕ್ಕೆ ಜೋಳ ಮುರಿದಿದ್ದನ್ನು ಮದ್ಯಾಹ್ನ 3 ಗಂಟೆಗೆ ಟ್ರಾಕ್ಟರ್ ಗೆ ಲೋಡ್ ಮಾಡಿದ ಮೆಕ್ಕೆ ಜೋಳವನ್ನು ಪ್ರಾ ಸಾ -1 , ಪ್ರಾ ಸಾ -2 , ಪ್ರಾ ಸಾ 5 ಮತ್ತು ಚಾಸಾ-13 ರವರು ತೆಗೆದುಕೊಂಡು ಹೋಗುತ್ತಿದ್ದರು, ಟ್ರಾಕ್ಟರ್ ನ್ನು ಪ್ರಾ ಸಾ 2 ಚಲಾಯಿಸುತ್ತಿದ್ದನು ಎಂದರೆ ಸರಿಯಲ್ಲ. ಆರೋಪಿಯ ಖಾಲಿ ಜಮೀನಿನಲ್ಲಿ ಹೋಗುತ್ತಿದ್ದಾಗ ಆರೋಪಿ ಬಂದು ಪ್ರಾ ಸಾ -2 ರವರ ಟ್ರಾಕ್ಟರ್ ನ್ನು ಅಡ್ಡಗಟ್ಟಿ ನಿಲ್ಲಿಸಿ ಸೂಳೆ ಮಕ್ಕಳಾ ಬೋಳಿ ಮಕ್ಕಳ ಅಂತ ಅವಾಚ್ಯ ಶಬ್ದಗಳಿಂದ ಬೈದನು ಎಂದರೆ ಸರಿಯಲ್ಲ. ಆರೋಪಿ ಏಕಾಏಕಿ ಪ್ರಾ ಸಾ -2 ರವರನ್ನು ಉದ್ದೇಶಿಸಿ ನಿನ್ನನ್ನು ಸಾಯಿಸಿಬಿಡುತ್ತೇನೆ ಎಂದು ಸಾಯಿಸುವ ಉದ್ದೇಶದಿಂದ ಮು ಮಾ 1 ರಿಂದ ಪ್ರಾ ಸಾ -2 ರವರ ತಲೆಗೆ ಹೊಡೆದಿದ್ದು ಆಗ ಪ್ರಾ ಸಾ 2 ಪ್ರಜ್ಞೆ ತಪ್ಪಿ ಬಿದ್ದನು ಎಂದರೆ ಸರಿಯಲ್ಲ. ಅಷ್ಟರಲ್ಲಿ ಟ್ರಾಕ್ಟರ್ ಮೇಲೆ ಇದ್ದ ಪ್ರಾ ಸಾ -1 , ಪ್ರಾ ಸಾ -4 ಮತ್ತು ಚಾಸಾ13 ರವರು ಟ್ರಾಕ್ಟರ್ ನಿಂದ ಇಳಿಯುತ್ತಿದ್ದಂತೆ ಆರೋಪಿ ಕೈಯ್ಯಲ್ಲಿದ್ದ ಮು ಮಾ -1 ನ್ನು ಬಿಸಾಡಿ ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ.

ಘಟನೆಯನ್ನು ನೋಡಿದಂತಹ ನಾನು, ಪ್ರಾ ಸಾ -1 , ಪ್ರಾಸಾ -4 ಚಾಸಾ 9 ರಿಂದ ಚಾಸಾ-13 ರವರು ಪ್ರಾ ಸಾ 2 ರವರನ್ನು ನೋಡಿದಾಗ ಅವರ ತಲೆಗೆ ಪೆಟ್ಟಾಗಿ ಬಾವು ಬಂದಿದ್ದು ಆತ ಪ್ರಜ್ಞೆ ತಪ್ಪಿದ್ದ ಎಂದರೆ ಸರಿಯಲ್ಲ. ಪ್ರಾ ಸಾ -2 ರವರನ್ನು ಪ್ರಾ ಸಾ -1 ಮತ್ತು ಚಾಸಾ 13 ರವರು ಸೇರಿ ಅವರಿಗೆ ಸೇರಿದ ಓಮಿನಿ ವಾಹನದಲ್ಲಿ ಆನವಟ್ಟಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ನಾನು ಗಲಾಟೆ ನೋಡಿದ್ದೇನೆ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ -9 ಎಂದು ಗುರುತಿಸಲಾಯಿತು.

ಘಟನೆಯನ್ನು ಕಣ್ಣಾರೆ ಕಂಡಿದ್ದರೂ ಸಹ ನಿಪಿ -9 ರಂತೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿಯೊಂದಿಗೆ ಶಾಮೀಲಾಗಿ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).